ಶ್ರೀ ಎ. ಆರ್. ಬದರಿನಾರಾಯಣ.—ಇದು ಟಿಂಪರರಿ ಮಿಸ್ ಅಪ್ರೊಪ್ರಿಯೇಷನ್.

ಶ್ರೀ ಕೋಣಂದೂರು ಲಿಂಗಪ್ಪ.— ಹಾಗಿದ್ದರೆ ನಮಗೂ ಒಂದು ಕೋಟಿ ರೂಪಾಯಿಗಳನ್ನು ಕೆಲವು ಕಾಲದ ವರೆಗೆ ಕೊಡಿ.

ಶ್ರೀ ಎ. ಆರ್ ಬದರಿನಾರಾಯಣ.—ಇದ್ದರೆ ಕೊಡೋಣ. ಆದರೆ ಈ ರೀತಿ ದುರುಪಯೋಗ ಮಾಡಿಕೊಳ್ಳಬಾರದಾಗಿತ್ತು. ಅವರ ಮೇಲೆ ಕಾರ್ಯಕ್ರಮವನ್ನು ಅಧಿಕೃತವಾಗಿ ತೆಗೆದುಕೊಂಡಿರುವ ಬಗ್ಗೆ ನನಗೆ ವರ್ತಮಾನ ಬಂದಿಲ್ಲ. ಆದರೆ ತೆಗೆದುಕೊಂಡಿದ್ದಾರೆಂದು ತಿಳಿದು ಬಂದಿದೆ. ಬೇಕಾದರೆ ಅದನ್ನು ತಿಳಿದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ —ಇನ್ನು ಮುಂದೆ ಪ್ರೀಮಿಯಂನ್ನು ಕಟ್ಟುವ ಬಗ್ಗೆ ಇಲ್ಲಿ ಕೆಲವು ಷರತ್ತುಗಳನ್ನು ಹಾಕಿದ್ದಾರೆ.

"Premium collected from June 1973 onward should be remitted before 10th of the next month."

ಎನ್ನುವ ಕಂಡಿಷನನ್ನು ಇಲ್ಲಿ ಹಾಕಲಾಗಿದೆ. ಈ ರೀತಿ ಹಾಕಿದ್ದರೂ ಸಹ ಜುಲೈ ೧೯೭೩ರ ಪ್ರೀಮಿಯಮ್‌ನ್ನು ೧೫-೮-೧೯೭೩ ರಂದು ಕಟ್ಟಿದ್ದಾರೆ. ನ್ಯಾಯವಾಗಿ ೧೦ನೇ ತಾರೀಖಿನೊಳಗೇ ಕಟ್ಟಬೇಕಾಗಿತ್ತು. ಮತ್ತು ಆಗಸ್ಟ ತಿಂಗಳದ್ದು ಲಿಸ್ಟ ಇನ್ನೂ ಬಂದಿಲ್ಲ ಎಂದು ಹೇಳಿದ್ದಾರೆ. ಹತ್ತನೇ ತಾರೀಖಿನೊಳಗೆ ಹಿಂದಿನ ತಿಂಗಳ ಕಂತನ್ನು ಕಟ್ಟಬೇಕೆಂದು ಲೈಫ್ ಇನ್ಸೂರೆನ್ಸ ಕಾರ್ಪೊರೇಷನ್‌ನವರು ತಿಳಿಸಿದ್ದರೂ ಸಹ ಅವರು ಅವರಂತೆ ಕಟ್ಟಿದೆ ಡಿಪಾಲ್ಟರ ಆಗಿದ್ದಾರೆ. ಕ್ರಮವಾಗಿ ಪಾವತಿ ಮಾಡುತ್ತಿಲ್ಲವೆಂಬುದು ತಮಗೆ ತಿಳಿಯುತ್ತಿಲ್ಲವೇ? ಈ ರೀತಿಯಾಗದಂತೆ ಸರಿಪಡಿಸುತ್ತೀರಾ?

ಶ್ರೀ ಎ. ಆರ್. ಬದರಿನಾರಾಯಣ.—ಜೂನ ತಿಂಗಳ ಪ್ರೀಮಿಯಮ್‌ನ್ನು ಸರಿಯಾಗಿ ಕಟ್ಟಿದ್ದಾರೆ. ಆದರೆ ಜುಲೈ ತಿಂಗಳದ್ದು ಮಾತ್ರ ೧೫ನೇ ತಾರೀಖು ಕಟ್ಟಿದ್ದಾರೆ. ಅದು ತಪ್ಪು. ಹತ್ತನೇ ತಾರೀಖಿನೊಳಗೆ ಕಟ್ಟಬೇಕೆಂದು ನಿಯಮ ಇರುವದು. ಇನ್ನು ಮುಂದೆ ಕಂಡೀಷನ್ ಪ್ರಕಾರ ಕಟ್ಟಿಸುವುದಕ್ಕೆ ಏನು ತಾಕೀತು ಮಾಡಬೇಕೋ ಅದನ್ನು ಮಾಡುತ್ತೇವೆ.

(iii) Re. Retrenchment of local candidates.

Sri KAGODU TIMMAPPA (Sagar). I call the attention of the Chief Minister to the retrenchment of Loclal Candidates.

Sri H. M. CHANNABASAPPA (Minister for Public Works and Electricity) [on behalf of the Chief Minister I make the following Statement.]

Government have taken a decision to make provision for regular direct recruitment to Class III posts of local candidates in such posts appointed on or after 1st October,

1969 and who have rendered one year of continuons service prior to 1st April 1973. It has been also decided that such appointments will be done subject to reservations in favour of Scheduled Castes, Scheduled Tribes and Backward Classes and that if local candidates belonging to Scheduled Castes and Scheduled Tribes are not available, the vacancies reserved for them would be carried forward in accordance with the existing orders. Such regular appointments of local candidates will, however, be against posts remaining vacant after appointing candidates selected by the Public Service Commission or other Recruitment Committees for Class III posts as it would not be legally correct to appoint the local candidates regularly in preference to the candidates already selected by the Public Service Commission and Recruiting Committees in accordance with the statutory rules. Instructions have accordingly been issued to appoint the candidates selected by the Public Service Commission or the Recruitment Committees first and thereafter, if vacancies are still available, to continue the local candidates against such vacancies after working out the reservations to be made in favour of Scheduled Castes, Scheduled Tribes and Backward Classes. "It has also been directed that if candidates belonging to Scheduled Castes and Scheduled Tribes are not available among the local candidates working in a department, candidates belonging to other categories should not be continued against such vacancies and that the vacancies should be kept unfilled in such an event." This has been done in order to ensure that the candidates belonging to Scheduled Castes and Scheduled Tribes get their due share. After taking action as indicated above, the local candidates were permitted to be continued till 30th September 1973. Statutory rules will have to be issued to enable regular appointment of such candidates. These rules have been drafted and are at present under the consideration of Government. As it may take some time more before the rules are issued, the Heads of Departments have been instructed separately to continue beyond 30th September 1973 such of the local candidates as would be eligible for regular appointment under the proposed rules, i. e.,

such local candidates who were appointed on or after 1-10-1969 and who have put in one year continuous service prior to 1-4-1973 and who were within the age limit prescribed and who possessed the prescribed educational qualifications at the time of their initial continuous appointment, if vacancies are available for them and to terminate the services of local candidates who will not be eligible for such regular appointments. Orders in this regard have been issued. "Even the local candidates whose services have been terminated or would be terminated hereafter for want of vacancies will be eligible for regular appointments in other departments after the statutory rules are issued, if they satisfy all the conditions relating to continuous service, qualifications, age limit, etc."

ಶ್ರೀ ಕಾಗೋಡು ತಿಮ್ಮಪ್ಪ.— ಸ್ವಾಮಿ, ತಾವು ಇಲ್ಲಿ ತಾ. ೧-೧೦-೧೯೬೯ ರಿಂದ ತಾ ೧-೪-೧೯೭೩ ರವರೆಗೆ ಯಾರಿಗೆ ಒಂದು ವರ್ಷ ಸರ್ವಿಸ್ ಆಗಿರುತ್ತದೋ ಅಂತಹ ಸ್ಥಳೀಯ ಅಭ್ಯರ್ಥಿಗಳನ್ನು ಆ ಸ್ಥಾನದಲ್ಲಿಯೇ ಕಾಯಂ ಮಾಡುವುದಾಗಿ ಹೇಳಿದ್ದೀರಿ. ಆದರೆ ಇದೇ ಅವಧಿಯಲ್ಲಿ ಯಾರಿಗೆ ಒಂದು ವರ್ಷದ ಸರ್ವಿಸ್ ಆಗಿರುತ್ತದೋ, ಅಂತಹವರ ಜಾಗಕ್ಕೆ ಪಿ. ಎಸ್ ಸಿ. ಅವರು ಬೇರೆ ಅಭ್ಯರ್ಥಿಗಳನ್ನು ನೇಮಕ ಮಾಡಿರುವುದರಿಂದ ಸ್ಥಳೀಯ ಅಭ್ಯರ್ಥಿಗಳಿಗೆ ತೊಂದರೆಯಾಗುತ್ತಿದೆ. ಈ ಕಾರಣದಿಂದ ಪಿ. ಎಸ್. ಸಿ. ಅವರು ಏನು ನೇಮಕ ಮಾಡಿದ್ದಾರೆ, ಆ ಲಿಸ್ಟನ್ನು ವಜಾ ಮಾಡುವಂತೆ ಅವರಿಗೆ ಸಲಹೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಈ ಬಗ್ಗೆ ಉತ್ತರ ಈ ಸ್ಟೇಟ್‌ಮೆಂಟಿನಲ್ಲಿಯೇ ಅಡಕವಾಗಿದೆ.

ಶ್ರೀ ಕೆ. ಎಚ್. ಹನುಮೇಗೌಡ.— ೧೯೭೯ನೇ ಇಸವಿಗಿಂತ ಮುಂಚೆಯೇ ಳಂ ಜನ ಅಭ್ಯರ್ಥಿಗಳು ತೋಟಗಾರಿಕೆ ಇಲಾಖೆಯಲ್ಲಿ ಸ್ಥಳೀಯ ಅಭ್ಯರ್ಥಿಗಳಾಗಿ ಸೇರಿಕೊಂಡು ಸೇವೆ ಮಾಡುತ್ತಿದ್ದರೂ ಸಹ ಅವರನ್ನು ಇದೇ ತಿಂಗಳ ೩೦ ರಂದು ಕೆಲಸದಿಂದ ಟರ್ಮಿನೇಟ್ ಮಾಡುವುದಾಗಿ ನೋಟೀಸ್ ಜಾರಿ ಮಾಡಿದ್ದಾರೆ. ತಮ್ಮ ಹೇಳಿಕೆಯ ಪ್ರಕಾರ ಇವರೂ ಸಹ ಕಂಟಿನ್ಯೂ ಆಗಬೇಕಾಗಿತ್ತು. ಆದರೆ ಟರ್ಮಿನೇಟ್ ಮಾಡುವುದಾಗಿ ನೋಟೀಸ್ ಜಾರಿ ಮಾಡಿದ್ದಾರೆ. ಈಗಲಾದರೂ ಸಹ ಆ ನೋಟೀಸ್‌ಗಳನ್ನು ವಾಪಸ್ ತೆಗೆದುಕೊಂಡು ಅದೇ ಜಾಗದಲ್ಲಿ ಅವರನ್ನು ಕಂಟಿನ್ಯೂ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಈ ಸ್ಟೇಟ್‌ಮೆಂಟಿನಲ್ಲಿ ಅಡಕವಾಗಿರುವ ಅಂಶಗಳಿಗೆ ವಿರುದ್ಧವಾಗಿ ಏನಾದರೂ ನಡೆದಿದ್ದರೆ ಅದನ್ನು ಸರಿಪಡಿಸುತ್ತೇವೆ.

ಶ್ರೀ ಎಚ್ ಟಿ. ಕೃಷ್ಣಪ್ಪ — ಇಲ್ಲಿ ಇನೇ ದರ್ಜೆಗೆ ಸೇರಿದ ನೌಕರರ ಬಗ್ಗೆ ಮಾತ್ರ ಹೇಳಿಕೆ ಕೊಟ್ಟಿದ್ದೀರಿ. ಈ ಒಂದು ಸ್ಟೇಟ್‌ಮೆಂಟ್ ಬೇರೆ ವರ್ಗದ ನೌಕರರಿಗೂ ಸಹ ಅನ್ವಯವಾಗುತ್ತದೋ ಅಥವಾ ಇಲ್ಲವೋ ಎಂಬುದನ್ನು ತಾವು ಸ್ಪಷ್ಟಪಡಿಸಬೇಕು.

ಇನ್ನು ಎರಡನೆಯದಾಗಿ ತಾವು ಇಲ್ಲಿ

"It has also directed that if candidates belonging to Scheduled Castes and Scheduled Tribes are not available amongst the local candidates working in a department, candidates belonging to other categories should hot be continued against such vacancies and that the vacancies should be kept unfilled in such an event."

ಎಂದು ಹೇಳಿದ್ದೀರಿ. ವೇಕೆನ್ಸಿ ಇರುವ ಕಡೆಗಳಲ್ಲಿ ಈ ವರ್ಗದ ಜನರು ಸಿಗುವವರೆಗೆ ಬೇರೆಯವರನ್ನು ಮುಂದುವರೆಸುವುದಕ್ಕೆ ಇರುವ ತೊಂದರೆಯಾದರೂ ಏನು ಎಂದು ಕೇಳುತ್ತೇನೆ. ಕೊನೆಯಲ್ಲಿ

"Even the local candidates whose services have been terminated or would be terminated hereafter for want of vacancies will be eligible for regular appointments in other departments after the statutory rules are issued if they satisfy all the conditions relating to continuous service, qualifications, age limit, etc.,

ಎಂದು ಹೇಳಿದ್ದೀರಿ. ಈ ರೀತಿ ಹೇಳಿರುವುದು ಬಹಳ ಆಪ್ಯಾಯಮಾನವಾಗಿದೆ. ಏಕೆಂದರೆ ಇದರಿಂದ ಎಷ್ಟೋ ಜನರಿಗೆ ಅನುಕೂಲವಾಗುತ್ತದೆ. ಆದರೆ ಏಜ್ ಲಿಮಿಟ್ ಎಂದು ಹೇಳಿರುವುದರಿಂದ ಕೆಲವರಿಗೆ ತೊಂದರೆಯಾಗುವುದಿಲ್ಲವೇ ಎಂದು ಕೇಳುತ್ತೇನೆ. ಏಕೆಂದರೆ ಕೆಲಸಕ್ಕೆ ಸೇರುವಾಗ ವಿತ್ ಇನ್ ದಿ ಏಜ್ ಲಿಮಿಟ್ ಇದ್ದರೂ ಸಹ ತಾವು ಇಲ್ಲಿ ಹೇಳಿರುವ ಪ್ರಕಾರ ಕನ್ಸಿಡರ್ ಮಾಡುವಾಗ ಏಜ್ ಬಾರ್ ಆಗಿದ್ದರೆ ಅಂತಹವರಿಗೆ ತೊಂದರೆಯಾಗುವುದಿಲ್ಲವೇ ? ಇದನ್ನು ಯಾವ ರೀತಿ ಕನ್ಸಿಡರ್ ಮಾಡುತ್ತೀರಿ ? ಈ ಮೂರು ಅಂಶಗಳಿಗೂ ತಾವು ಉತ್ತರ ಕೊಡಬೇಕು;

ಶ್ರೀ ಎಚ್. ಎಂ. ಚನ್ನಬಸಪ್ಪ — ಮಾಡಿರತಕ್ಕ ಸ್ಟೇಟ್‌ಮೆಂಟ್ ಸ್ವಲ್ಪ ಮಟ್ಟಿಗೆ ವಿಶದವಾಗಿಯೇ ಇದೆ, ಅನುಮಾನಕ್ಕೆ ಎಡೆಕೊಡುವ ರೀತಿಯಲ್ಲಿ ಮಾಡಿಲ್ಲ. ಹರಿಜನರಿಗೆ ಸಿಗದಿ ಮಾಡಿರತಕ್ಕ ವೇಕೆನ್ಸಿಗಳಿಗೆ ಅಕಸ್ಮಾತ್ ಹರಿಜನರು ಸಿಕ್ಕದೆ ಇದ್ದರೆ ಅವನ್ನು ಭರ್ತಿ ಮಾಡಬೇಡಿ ಎಂದು ಹೇಳಿರತಕ್ಕ ವಿಚಾರದ ಬಗ್ಗೆ ಕೇಳಿದ್ದಾರೆ. ಹರಿಜನಗಿರಿಜನರಿಗೆ ಸೇಕಡ ಗಿಲರಷ್ಟು ಸ್ಥಾನ ಸೇರಬೇಕಾದ್ದು ತಪ್ಪಿ ಹೋಗಬಾರದು ಎನ್ನುವ ಉದ್ದೇಶವಿದೆಯೇ ಹೊರತು ಇನ್ನೇನೂ ಇಲ್ಲ. ಎರಡನೆಯದಾಗಿ ಏಜ್

ಲಿಮಿಟ್ ಬಗ್ಗೆ ಮಾತನಾಡುತ್ತ ಕೆಲಸಕ್ಕೆ ಸೇರುವ ಕಾಲಕ್ಕೆ ಏಜ್ ಲಿಮಿಟ್‌ನೊಳಗೇ ಇದ್ದು ಈಗ ಏಜ್ ಬಾರ್, ಆಗುವುದರಿಂದ ಅದನ್ನು ಈ ಹೊತ್ತು ಸಡಿಲ ಮಾಡ ಬೇಕೆಂದು ಹೇಳಿದ್ದಾರೆ. ಅದು ಅಷ್ಟು ಸಾಧುವಾಗಿ ಕಾಣುವುದಿಲ್ಲ. ಏಜ್ ಲಿಮಿಟ್ ನಾವು ಪರಿಗಣನೆಗೆ ತೆಗೆದುಕೊಳ್ಳದೆ ಹೋದರೆ ಉದಾಹರಣೆಗೆ ಒಬ್ಬ ನಾಲ್ಕು ವರ್ಷವಾದ ಮೇಲೆ ಅರ್ಜಿ ಹಾಕಿಕೊಂಡು ನಾನು ಸ್ಥಳೀಯ ಅಭ್ಯರ್ಥಿಯಾಗಿ ಕೆಲಸ ಮಾಡುತ್ತಿದ್ದೆ, ಒಂದು ವರ್ಷ ಕಂಟಿನುಯಸ್ ಸರ್ವಿಸ್ ಆಗಿದೆ ಎಂದು ತಿಳಿಸಿದರೆ ಅದನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಈಗ ನಾವು ರೂಲ್ಸ್ ಮಾಡುತ್ತಿದ್ದೇವೆ. ಆ ಜನಗಳಿಗೆ ತೊಂದರೆಯಾಗದ ರೀತಿಯಲ್ಲಿ ಮಾಡಬೇಕು ಎನ್ನುವುದೇ ಸರ್ಕಾರದ ಆಸೆಯಾಗಿದೆ. ರೂಲ್ಸ್ ಮಾಡುವಾಗ ಎಷ್ಟು ಹೆಚ್ಚು ಅನು ಕೂಲಗಳನ್ನು ಅವರಿಗೆ ಮಾಡಿಕೊಡಬಹುದೋ ಅಷ್ಟು ಪ್ರಮಾಣದಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಮಾನ್ಯ ಮಂತ್ರಿಗಳ ಹೇಳಿಕೆ ಕೇವಲ ಮೂರನೇ ದರ್ಜೆ ವರ್ಗದ ನೌಕರರಿಗೆ ಅನ್ವಯವಾಗುವ ರೀತಿಯಲ್ಲಿದೆ. ಅದು ಎಲ್ಲ ವರ್ಗದ ನೌಕರರಿಗೂ ಅನ್ವಯವಾಗುತ್ತದೆಯೋ ಇಲ್ಲವೋ ? ಹರಿಜನ ಗಿರಿಜನರಿಗೆ ೧೮ ಪರ್ಸೆಂಟ್ ವೇಕೆನ್ಸಿ ಇದ್ದಾಗ ಸ್ಯೂಟಬಲ್ ಕ್ಯಾಂಡಿಡೇಟ್ಸ್ ಆ ವರ್ಗಗಳಿಂದ ದೊರೆಯದೆ ಹೋದಾಗ ಈಗ ಇರತಕ್ಕ ಸ್ಥಳೀಯ ಅಭ್ಯರ್ಥಿಗಳನ್ನು ಮುಂದುವರಿಸು ವುದರಿಂದ ಆಗತಕ್ಕ ತೊಂದರೆಗಳೇನು ? ಏಜ್ ಲಿಮಿಟ್ ಸೇರಿಕೊಳ್ಳುವ ಕಾಲಕ್ಕೆ ಇರಬೇಕಾದ ವಯೋಮಿತಿಯಲ್ಲಿದ್ದು ಈಗ ಏಜ್ ಲಿಮಿಟ್ ಮೀರಿರುತ್ತದೆ. ಅವರ ಗತಿ ಏನು ? ಇವರ ವಿಚಾರವನ್ನೂ ಸಹಾನುಭೂತಿಯಿಂದ ಪರಿಶೀಲನೆ ಮಾಡ ಲಾಗುತ್ತದೆಯೋ ಇಲ್ಲವೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಮೂರನೇ ದರ್ಜೆ ಮತ್ತು ಅದಕ್ಕೆ ಕೆಳ ಪಟ್ಟ ಹುದ್ದೆಗಳಿಗೆ ಮಾತ್ರ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕಮಾಡಿಕೊಳ್ಳ ಲಾಗುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಎರಡನೇ ದರ್ಜೆಗೂ ನೇಮಕ ಮಾಡಿಕೊಳ್ಳ ಲಾಗುತ್ತಿದೆ. ಅವರಿಗೂ ಇದು ಅನ್ವಯವಾಗುತ್ತದೆಯೋ ಇಲ್ಲವೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಎರಡನೇ ದರ್ಜೆಗೆ ಸ್ಥಳೀಯ ಅಭ್ಯರ್ಥಿ ಗಳನ್ನು ನೇಮಕ ಮಾಡಿಕೊಳ್ಳುವದಿಲ್ಲ. ಒಂದು ವೇಳೆ ಹಾಗೇನಾದರೂ ನೇಮಕ ಗಳಾಗಿದ್ದರೆ ಅವರಿಗೆ ಇದು ಅನ್ವಯವಾಗುವುದಿಲ್ಲ. ಹರಿಜನ ಗಿರಿಜನರಿಗೆ ನಿಗದಿ ಮಾಡಿರತಕ್ಕ ಜಾಗಗಳನ್ನು ಕಾದಿಟ್ಟು ಅವರಿಗೇ ಕೊಡಬೇಕೆಂಬುದು ಸರ್ಕಾರದ ಇಚ್ಛೆಯಾಗಿದೆ. ಸಾಕಷ್ಟು ಸಂಖ್ಯೆಯಲ್ಲಿ ಅಭ್ಯರ್ಥಿಗಳಿದ್ದಾರೆ. As a measure of abundant Caution ಅದನ್ನು ಹಾಕಿದ್ದೇವೆ. ಮಾನ್ಯ ಸದಸ್ಯರು ಹೇಳುವುದನ್ನೂ ಪರ್ಯಾಲೋಚನೆ ಮಾಡುತ್ತೇವೆ. ಏಜ್ ಲಿಮಿಟ್ ರಿಲ್ಯಾಕ್ಸ್ ಮಾಡುವ ವಿಚಾರ

ದಲ್ಲಿ ನನ್ನ ಪ್ರಥಮ ಪ್ರತಿಕ್ರಿಯೆ ಏನಂದರೆ ಆ ರೀತಿಯಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಮಾನ್ಯ ಸದಸ್ಯರು ವಯೋಮಿತಿಯನ್ನು ಸಡಿಲಗೊಳಿಸುವ ವಿಚಾರವನ್ನು ಪರಿಶೀಲಿಸಬೇಕು ಎಂದು ಹೇಳುತ್ತಿರುವುದರಿಂದ ಆ ರೀತಿ ಮಾಡುವುದಕ್ಕೆ ನನ್ನ ಆಭ್ಯಂತರವಿಲ್ಲವೆಂದು ಮಾತ್ರ ಹೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ೧೯೬೯ಕ್ಕೆ ಮೊದಲು ಅನೇಕ ಜನ ಹೆಣ್ಣು ಮಕ್ಕಳನ್ನು ಎರಡು ಮತ್ತು ಮೂರನೆ ದರ್ಜೆ ನೌಕರರಾಗಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿದ್ದು, ಒಂದು ಕಡೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನವರು ಅವರ ಹೆಸರುಗಳನ್ನು ಪುನಃ ಇಲಾಖೆಗೆ ಕಳುಹಿಸಿಲ್ಲ. ಅವರನ್ನೆಲ್ಲ ೩೦-೯-೧೯೭೩ಕ್ಕೆ ರಿಲೀವ್ ಮಾಡಬೇಕೆಂದು ಆಜ್ಞೆ ಬಂದಿದೆ. ಅವರನ್ನೆಲ್ಲ ರಿಲೀವ್ ಮಾಡಬೇಡಿ ಎಂದು ಸೂಚನೆಗಳನ್ನು ಕಳುಹಿಸುತ್ತಾರೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ನಾನು ಮಾಡಿರುವ ಹೇಳಿಕೆಯಲ್ಲಿ ಈ ವಿಚಾರವನ್ನು ಸ್ಪಷ್ಟವಾಗಿ ಹೇಳಿದ್ದೇನೆ.

OFFICIAL RESOLUTIONS

(i) Re : Approval of the notification issued under the Cotton Transport Act 1923 in respect of Dharwar, Chitradurga, Bellary, Mysore and Bagalkot Area.

Sri K. H. PATIL (Minister for Agriculture and Forests).— I beg to move :--

> "That the four Notifications in respect of Dharwar, area, Chitradurga-Bellary area, Mysore area, Bagalkot area (copies already circulated to members) to be issued in exercise of the powers conferred by Section 3 of the Cotton Transport Act 1923 (Central Act 3 of 1923) be approved."

MADAM SPEAKER.— Motion moved :

> "That the four Notifications in respect of Dharwar area, Chitradurga-Bellary area, Mysore area, Bagalkot area (copies already circulated to members) to be issued in exercise of the powers conferred by Section 3 of the Cotton Transport Act 1923 (Central Act 3 of 1923) be approved."